ಸೇರಿದಂತೆ) ಮಂಜೂರ್ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

ಬೇಡಿಕೆ ಸಂಖ್ಯೆ: 02 - ತೋಟಗಾರಿಕೆ

ಶ್ರೀ ಎಂ.ಪಿ. ಪ್ರಕಾಶ (ಕೃಷಿ ಮತ್ತು ತೋಟಗಾರಿಕೆ ಸಚಿವರ ಪರವಾಗಿ) :- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆ ಸಂಖ್ಯೆ 02ಕ್ಕೆ ಸಂಬಂಧಿಸಿದಂತೆ "ತೋಟಗಾರಿಕೆ"ಗೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 30,62,13,000 ರೂ.ಗಳಿಗೆ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 18,33,000 ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರ್ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

ಬೇಡಿಕೆ ಸಂಖ್ಯೆ : 3 - ಪಶುಸಂಗೋಪನೆ

ಶ್ರೀ ಎಂ.ಪಿ. ಪ್ರಕಾಶ್ (ಪಶುಸಂಗೋಪನಾ ಸಚಿವರ ಪರವಾಗಿ) :- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆ ಸಂಖ್ಯೆ 3 ಕ್ಕೆ ಸಂಬಂಧಿಸಿದಂತೆ "ಪಶುಸಂಗೋಪನೆ" ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 47,19,35,000 ರೂ.ಗಳಿಗೆ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರ್ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

(9) ಅಧ್ಯಕ್ಷರ ಅಪ್ಪಣೆ ಮೇರೆಗೆ :

ವಿಷಯ : ರಾಜ್ಯದಲ್ಲಿ ಕನ್ನಡ ಭಾಷೆಯನ್ನು ಕಡೆಗಾಣಿಸಿರುವ ಬಗ್ಗೆ ಮಾತನಾಡಿದ ವಿಷಯಗಳಿಗೆ ಅಧ್ಯಕ್ಷರು ನೀಡಿರುವ ತೀರ್ಪನ್ನು ಪುನರ್ ಪರಿಶೀಲಿಸುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :- ಮಾನ್ಯ ಅಧ್ಯಕ್ಷರೇ, ಇಂದು ಬೆಳಿಗ್ಗೆ ನಾನು ಪ್ರಶ್ನೋತ್ತರ ಕಾಲಕ್ಕೆ ಮುಂಚಿತವಾಗಿ, ಕನ್ನಡ ಆಡಳಿತ ಭಾಷೆ ಕರ್ನಾಟಕ ಸರ್ಕಾರ ಮಾಡಿಲ್ಲ, ಪ್ರಾಮಾಣಿಕವಾದ ಚಿಂತನೆ ನಡೆದಿಲ್ಲ, ಎಲ್ಲೆಲ್ಲೂ ಕನ್ನಡ ನಾಟುತ್ತಾ ಇಲ್ಲ ಪ್ರತಿ ಇಲಾಖೆಗಳಲ್ಲೂ ಕನ್ನಡವನ್ನು ಮರೆತಿದ್ದಾರೆ. ಈ ರಾಜ್ಯ ಸಮಗ್ರವಾಗಿ, ಕರ್ನಾಟಕ ಏಕೀಕರಣವಾದಾಗಿನಿಂದ ಎಲ್ಲಾ ಸರ್ಕಾರಗಳೂ ಕನ್ನಡವನ್ನು ಕಡೆಗಾಣಿಸಿದ್ದಾರೆ. ಹೊರನಾಡು ಕನ್ನಡಿಗರ ಬಗ್ಗೆ ಚಿಂತನೆ ಇಲ್ಲ. ಗಡಿನಾಡು ಕನ್ನಡಿಗರ ಬಗ್ಗೆ ಯಾವುದೇ ಗಮನವಿಲ್ಲವೆಂದು ಹೇಳಿ ನಿರಂತರವಾಗಿ ಈ ರಾಜ್ಯದ ಸಮಗ್ರ ಚಿಂತನೆ ಬಗ್ಗೆ ಅನ್ಯಾಯವಾಗಿದೆ ಎಂದು ನಾನು ಪ್ರಾರಂಭ ಮಾಡಿದೆ. ತಾವು ಹೇಳಿದಿರಿ, ಪ್ರಶ್ನೋತ್ತರವಾದ ನಂತರ ಮಾತನಾಡಿ ಎಂದು ಹೇಳಿದಿರಿ. ನಾನು ಹೇಳಿದೆ ನಿಜ ಇದರ ಅವಶ್ಯಕತೆ ಇದೆ, ಈಗಲೇ ಆಗಬೇಕು ಪ್ರಶ್ನೋತ್ತರ ಕಾಲವನ್ನು ಮುಂದೂಡಿ ಇದನ್ನು ಮಾಡಬೇಕೆಂಬ ಮಾತನ್ನು ಹೇಳಿದೆ. ಇಷ್ಟೆಲ್ಲಾ ಹೇಳಿ, ಆ ಇಂಗ್ಲೀಷಿನ ಕಡತವನ್ನು, ಯಾವುದು ಸರ್ಕಾರ ಆಡಳಿತ ಭಾಷೆ ಎಂದು ಹೇಳಿ, ಆಡಳಿತ ನಡೆಸುತ್ತೇವೆಂದು ಹೇಳಿ, ಒಂದು ಆಶಾಢಭೂತಿತನದಲ್ಲಿ ನಡೆದುಕೊಳ್ಳತಕ್ಕ ಸರ್ಕಾರದ ಒಂದು ನೀತಿಯನ್ನು ವಿರೋಧಿಸಿ, ಅದನ್ನು ಸುಟ್ಟುಹಾಕುತ್ತೇನೆಂದು ಹೊರಟೆ. ಇನ್ನೂ ಸುಡಲಿಲ್ಲ. ಸುಡುವ ಮಟ್ಟಕ್ಕೆ ನಾನು ಹೊರಟೆ. ಆಮೇಲೆ ನೀವೆಲ್ಲಾ ಇದು ಸರಿಯಿಲ್ಲವೆಂದು ಹೇಳಿದಾಗ, ಆಯಿತು ಹೊರಗಡೆ

ಸುಡುತ್ತೇನೆಂಬ ಮಾತನ್ನು ಹೇಳಿ, ನಾನು ಸುಭಾತ್ಯಾಗ ಮಾಡಿದೆ. ಆದಾದ ನಂತರ ತಾವು ಒಂದು ತೀರ್ಪನ್ನು ಕೊಟ್ಟು, ನಾನು ಮಾತನಾಡಿರುವುದು ಸಂಪೂರ್ಣವಾಗಿ ಯಾವುದೂ ಪತ್ರಿಕೆಯಲ್ಲಿ ಬರಕೂಡದು, ಮತ್ತು ದೂರದರ್ಶನದಲ್ಲೂ ಬರಕೂಡದು ಎಂಬ ತೀರ್ಪನ್ನು ಕೊಟ್ಟಿರಿ. ನನಗನ್ನಿಸಿತು, ಈ ಪ್ರಶ್ನೋತ್ತರ ಕಾಲಕ್ಕಿಂತ ಮುಂಚಿತವಾಗಿ, ಈ ಸದನದಲ್ಲಿ ಮಾತನಾಡದೆ ಇರತಕ್ಕ ದಿನಗಳು ಇಲ್ಲ. ಅನೇಕ ಸಂದರ್ಭಗಳಲ್ಲಿ ಪ್ರಶ್ನೋತ್ತರ ಕಾಲಕ್ಕಿಂತ ಮುಂಚೆ ಇಂತಹ ನಿಲುವಳಿ ಸೂಚನೆ ತಂದಾಗ ಮಾತನಾಡಿದ್ದಾರೆ. ಅದು ಪತ್ರಿಕೆಯಲ್ಲೂ ಬಂದಿದೆ ಮತ್ತು ದೂರದರ್ಶನ ದಲ್ಲೂ ಬಂದಿರತಕ್ಕ ನಿದರ್ಶನ ಇದೆ. ಇವತ್ತು ನಾನು ಮಾತನಾಡಿರತಕ್ಕ ಯಾವುದೇ ಪದದಲ್ಲಿ ಸಂಸದೀಯ ನಡವಳಿಕೆಗೆ ವಿರುದ್ಧವಾದ ಪದಗಳನ್ನು ಆಡಿಲ್ಲ. ಒಂದು ಮಾತನ್ನು ತಾವು ಹೇಳುತ್ತೀರಿ. ತಾವು ನನ್ನ ಇಡೀ ಹೋರಾಟ ಮತ್ತು ಇತಿಹಾಸವನ್ನು ನೋಡಿದ್ದೀರಿ. ಸುಮಾರು 40 ವರ್ಷಗಳ ಕಾಲ ಈ ರಾಜ್ಯಕ್ಕೋಸ್ಕರವಾಗಿ, ರಾಜ್ಯದ ಅಭ್ಯುದಯಕ್ಕೋಸ್ಕರವಾಗಿ, ಕನ್ನಡಿಗರ ಏಳಿಗೆಗೋಸ್ಕರವಾಗಿ, ಕನ್ನಡದ ಚಿಂತನೆಗೋಸ್ಕರವಾಗಿ ನಿರಂತರವಾಗಿ ಚಿಂತನೆ ಮಾಡಿದ್ದೇನೆ. ಬೂಟ್ಸ್ ಏಟು ತಿಂದಿದ್ದೇನೆ, ಲಾಠಿ ಏಟು ತಿಂದಿದ್ದೇನೆ, ಹೋರಾಟ ಮಾಡಿ ಸಾವಿರಾರು ಬಾರಿ ಜೈಲಿಗೆ ಹೋಗಿದ್ದೇನೆ. ಈ ನನ್ನ ಹೋರಾಟವನ್ನು, ನನ್ನ ಹಿಂದೆ, ಮುಂದೆ ನೋಡಿರತಕ್ಕವರು ನೀವು. ಆದರೆ, ಒಂದು ಮಾತನ್ನು ತಾವು ಮಾತನಾಡುವಾಗ, ಬಹುಶಃ ತಾವು ಆವೇಶದಲ್ಲಿ ಇದನ್ನು ಮಾತನಾಡಿರಬಹುದೆಂದು ಅನ್ನಿಸುತ್ತದೆ. ತಾವು ತೀರ್ಪನ್ನು ಕೊಡುವಾಗ, ಯಾವ ಕಾರಣಕ್ಕಾಗಿ ಇಂಥಾದ್ದು ನಡೆಯುತ್ತಿವೆ ಎಂದು ನನಗೆ ಗೊತ್ತಾಗಿದೆ ಎಂಬ ಒಂದು ಮಾತನ್ನು ಹೇಳಿದಿರಿ. ಇದರ ಅರ್ಥ, ಇನ್ನೂ ನನಗೆ ಅರ್ಥವಾಗಿಲ್ಲ. ನೀವು ಅದೇ ಅರ್ಥದಲ್ಲಿ ನನ್ನನ್ನು ಭಾವಿಸುವುದಾದರೆ; ಆ ಚಿತ್ರವನ್ನು ನೋಡಿದ್ದರೆ, ನಾನು ಅದರ ಬಗ್ಗೆ ಮುಂದಕ್ಕೆ ಹೋಗುವುದಿಲ್ಲ. ನೀವು ನನ್ನನ್ನು ಬಹಳ ವರ್ಷಗಳ ಕಾಲ ನೋಡಿದ್ದೀರಿ, ಅದರ ಬಗ್ಗೆ ನಾನು ಚಿಂತನೆ ಮಾಡುವುದಕ್ಕೆ ಹೋಗುವುದಿಲ್ಲ.

ನನ್ನನ್ನು ತಾವು ಬಹಳ ವರ್ಷಗಳ ಕಾಲದಿಂದಲೂ ನೋಡಿದ್ದೀರಿ, ಅದರ ಬಗ್ಗೆ ನಾನು ಚಿಂತೆ ಮಾಡುವುದಕ್ಕೆ ಹೋಗುವುದಿಲ್ಲ. ಈ ಒಂದು ಪರಿಸ್ಥಿತಿಯಲ್ಲಿ ತಾವು ಯಾವುದೂ ಬರಕೂಡದು ಎಂದು ಹೇಳಿ, ಪತ್ರಿಕೆಗಳಿಗೆ ಹೇಳತಕ್ಕಂಥ ಪ್ರಸಂಗ ಸರಿಯೇ? ತಮ್ಮ ತೀರ್ಪನ್ನು ತಾವು ಪುನರ್‌ಪರಿಶೀಲನೆ ಮಾಡತಕ್ಕಂಥಾದ್ದಕ್ಕೆ ಅವಕಾಶ ಇದೆ. ತಾವು ಪುನರ್ ಪರಿಶೀಲನೆ ಮಾಡದೇ ಇದ್ದರೂ ನನಗೇನೂ ನಷ್ಟ ಲಾಭ ಎನ್ನುವುದಕ್ಕಿಂತ ಹೆಚ್ಚಾಗಿ, ನಾನು ಸುಮಾರು 40 ವರ್ಷಗಳ ಕಾಲ ನಿರಂತರವಾಗಿ ಈ ರಾಜ್ಯದಲ್ಲಿ ಕನ್ನಡದ ಬಗ್ಗೆ ಹಗಲು ರಾತ್ರಿ ಹೋರಾಟ ಮಾಡಿರತಕ್ಕಂಥ ಇತಿಹಾಸ ಇದೆ. ಇತಿಹಾಸಕಾರರು ಬರೆಯಬೇಕಾದರೆ ಇದೊಂದು ಇತಿಹಾಸವನ್ನು ಬರೆದೇ ಬರೆಯುತ್ತಾರೆ. ಅದನ್ನು ಕಣ್ಣು ಮುಚ್ಚಿ, ಯಾರು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಅಂಥಾದ್ದರಲ್ಲಿ ನನ್ನನ್ನು ಹೊಗಳಿರತಕ್ಕಂಥವರು, ರಾಷ್ಟ್ರ ಕವಿ ಕುವೆಂಪು ಹೊಗಳಿದ್ದಾರೆ. ದ.ರಾ.ಬೇಂದ್ರೆ ಹೊಗಳಿದ್ದಾರೆ. ಡಾಃ ಕಾರಂತರು ಹೊಗಳಿದ್ದಾರೆ. ಡಾಃ ರಾಜರತ್ನಂ ಹೊಗಳಿದ್ದಾರೆ. ಡಿ.ವಿ. ಗುಂಡಪ್ಪನವರು ಹೊಗಳಿದ್ದಾರೆ. ಈ ರಾಜ್ಯದ ಅನೇಕರು ಹೊಗಳಿದ್ದಾರೆ. ಇದಕ್ಕೊಂದು ಇತಿಹಾಸ ಇದೆ. ಇವತ್ತು ಇಲ್ಲಿ ನಡೆದಂತಹ ಘಟನೆಯಿಂದ ನನ್ನ ಮನಸ್ಸಿಗೆ ಬಹಳ ನೋವಾಗಿದೆ. ಆ ದೃಷ್ಟಿಯಿಂದ ತಾವು ಈ ತೀರ್ಪನ್ನು ಪುನರ್ ಪರಿಶೀಲನೆ ಮಾಡಬೇಕು, ಏಕೆಂದರೆ ತಾವು ಈ ಹಿಂದೆ ಈ ರಾಜಕಾರಣದಲ್ಲಿ ಈ ಸಭೆಯ ಅಧ್ಯಕ್ಷರಾಗುವುದಕ್ಕಿಂತ ಮುಂಚೆ ಎಷ್ಟು ಹೋರಾಟಗಳು ಮಾಡಿದ್ದೀರಿ ? ನಾವು ನೀವು ಒಟ್ಟಿಗೆ ಹೋರಾಟಗಳನ್ನು ಮಾಡಿದ್ದೇವೆ.

ಹಾದಿಬೀದಿಗಳಲ್ಲಿ ಹೋರಾಟ ಮಾಡಿದ್ದೇವೆ. ಹಿಂದೆ ವಿದ್ಯಾರ್ಥಿಗಳ ಚಳುವಳಿಯಲ್ಲಿ ಹೋರಾಟ ಮಾಡಿದ್ದೇವೆ. ಇವೆಲ್ಲವನ್ನು ನೋಡಿರತಕ್ಕಂಥವರು, ಆ ಚಿತ್ರ ಇವತ್ತು ಕೊಟ್ಟಂತಹ ಚಿತ್ರಕ್ಕೆ ನನಗೇನೊ ಒಂದು ತರಹ ಬಹಳ ಆಶ್ಚರ್ಯವಾಗುತ್ತಿದೆ. ತಾವು ಇದನ್ನೇ ತೀರ್ಮಾನ ಮಾಡುವುದಾದರೆ ನಾಳೆ ಬೆಳಿಗ್ಗೆ ನಾನು ನನ್ನ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಡುತ್ತೇನೆ. ಇದೇ ತೀರ್ಮಾನ ತಾವು ಮಾಡುವುದಾದರೆ. ವಾಟಾಳ್ ನಾಗರಾಜುರವರೇ, ನಾನು ಇದೇ ತೀರ್ಮಾನಕ್ಕೆ ನಿಂತಿದ್ದೇನೆ ಎಂದು ಅಂದರೆ, ನಾಳೆ ಬೆಳಿಗ್ಗೆ ಈ ಸದನದಲ್ಲಿ ನಾನು ನನ್ನ ರಾಜೀನಾಮೆಯನ್ನು ತಮ್ಮ ಮುಂದೆ ಇಡುತ್ತೇನೆ. ನಾನು ಇದಕೋಸ್ಕರ ಈ ಸದನಕ್ಕೆ ಬರಲಿಲ್ಲ. ಇದಕೋಸ್ಕರ ನಾನು ನನ್ನ 40 ವರ್ಷಗಳ ಹೋರಾಟ ನಡೆಸಲಿಲ್ಲ. ಇವತ್ತೂ ಕನ್ನಡಕ್ಕೆ ಇಲ್ಲಿ ಏನೂ ಆಗಿಲ್ಲ. ಕನ್ನಡವನ್ನು ಕಡೆಗಾಣಿಸಿದ್ದಾರೆ. ಕನ್ನಡಕ್ಕೆ ಅನ್ಯಾಯವಾಗಿದೆ. ಕನ್ನಡ ನಿಜವಾಗಿಯೂ ಈ ರಾಜ್ಯದಲ್ಲಿ ಇಲ್ಲ ಎಂದು ನಾನು ಇದನ್ನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ವಲಸೆ ಬಂದಿರತಕ್ಕಂಥಾದ್ದು, ಅದರ ಪರಿಸ್ಥಿತಿ, ಕನ್ನಡಿಗರು ಕರ್ನಾಟಕ ರಾಜ್ಯದಲ್ಲಿ ಉಳಿದಿಲ್ಲ. ಅನೇಕ ಜಿಲ್ಲೆಗಳು, ರಾಯಚೂರು, ಮಂಗಳೂರು, ಬೆಂಗಳೂರು, ಬೆಳಗಾವಿ, ಕೊಡಗು, ನಮ್ಮಲ್ಲಿ ಉಳಿದಿಲ್ಲ. ಈ ಪರಿಸ್ಥಿತಿ ಇವತ್ತು ಇರುವಾಗ ನಾನೊಬ್ಬನೇ ಈ ಬಗ್ಗೆ ನಿರಂತರವಾಗಿ ಹೋರಾಟ ಮಾಡಿಕೊಂಡು ಬಂದಿದ್ದೇನೆ. ಯಾವ ಪಾರ್ಟಿಯವರೂ ಸಹ ಇದರ ಬಗ್ಗೆ ಬಾಯಿ ಬಿಡುತ್ತಿಲ್ಲ. ಯಾವ ಪಾರ್ಟಿಯವರೂ ಸಹ ಇದರ ಬಗ್ಗೆ ಚಕಾರ ಎತ್ತುತ್ತಿಲ್ಲ. ಅಂಥಾದ್ದರಲ್ಲಿ ನಾನು ಹಗಲು ರಾತ್ರಿ ಹೋರಾಟ ಮಾಡುತ್ತಿದ್ದೇನೆ. ಇವತ್ತು ನಾವು ಕೊಟ್ಟಂತಹ ತೀರ್ಪು, ನನಗೆ ನನ್ನ ದೃಷ್ಟಿಯಿಂದ ಆ ತೀರ್ಪನ್ನು ಪುನರ್ ಪರಿಶೀಲನೆ ಮಾಡಿ, ಎಂದು ನಾನು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

ಅಧ್ಯಕ್ಷರು :- ತಾವು ಮನವಿ ಸಲ್ಲಿಸಿದ್ದೀರಿ. ಬೆಳಿಗ್ಗೆ ನಡೆದಂತಹ ಘಟನೆಯನ್ನು ನಾನು ಸ್ವಲ್ಪ ಮಟ್ಟಿಗೆ ತಮ್ಮ ನೆನಪಿಗೆ ತಾವು ತಂದುಕೊಳ್ಳಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಸದನದಲ್ಲಿ ಅನೇಕ ಕಾರಣಗಳಿಂದ, ನಾನು ತಮ್ಮ ವಿಚಾರದಲ್ಲಿ ಅಗತ್ಯಕ್ಕಿಂತ ಹೆಚ್ಚು ಸಲಿಗೆಯಿಂದ ಇರುತ್ತೇನೆ ಎನ್ನುವಂತಹ ಅಭಿಪ್ರಾಯ ಕೆಲವರು ವ್ಯಕ್ತಪಡಿಸುತ್ತಾರೆ, ಕೆಲವರು ವ್ಯಕ್ತಪಡಿಸುವುದಿಲ್ಲ, ಕೆಲವರು ಟೀಕೆಯನ್ನೂ, ಸಹ ಮಾಡುತ್ತಾರೆ. ನನಗೆ ಪ್ರೀತಿ ವಿಶ್ವಾಸಗಳು ಇರಬಹುದೇ ಹೊರತಾಗಿ, ನಿಯಮಗಳನ್ನು ಯಾರ ವೈಯಕ್ತಿಕ ಸಂಬಂಧಗಳಿಗೆ ಸಡಿಲಗೊಳಿಸತಕ್ಕಂಥ ಮನುಷ್ಯ ನಾನಲ್ಲ. ಮತ್ತೆ ತಾವು ಈಗ ಏನೇನು ಎಲ್ಲಾ ಹೇಳಿದಿರಿ ಬೆಳಿಗ್ಗೆ ಏನೇನು ಹೇಳಿದಿರಿ, ಅದರಲ್ಲಿ ಯಾವುದೂ ಅಸಂಸದೀಯವಾದ ಮಾತುಗಳು ಇಲ್ಲ. ಆ ಸಂದರ್ಭ ಏನು ಇತ್ತು, ತಾವು ಆ ಲೆಟರ್ ಹಿಡಿದುಕೊಂಡಿದ್ದು, ಆ ಪೇಪರ್ ಹಿಡಿದುಕೊಂಡಿದ್ದು, ಅದರ ಜೊತೆಗೆ ಆ ಮಾತುಗಳೆಲ್ಲಾ ಹೇಳುತ್ತಿದ್ದಿದ್ದು ನಾನು ಬೆಳಿಗ್ಗೆ ತೆಗೆದುಕೊಂಡಂತಹ ನಿಲುವು ತೆಗೆದುಕೊಳ್ಳದೇ ಹೋಗಿದ್ದಿದ್ದರೆ ಅದು ಒಳ್ಳೆಯ ಸಂಪ್ರದಾಯವಾಗುತ್ತಿರಲಿಲ್ಲ. ರಾಜ್ಯಪಾಲರ ಭಾಷಣದ ಸಮಯದಲ್ಲಿ ತಾವು ಮಾಡತಕ್ಕಂಥ ಕೆಲವು ಚರ್ಯೆಗಳಿಗೆ, ಕ್ರಮ ತೆಗೆದುಕೊಳ್ಳುವ ಅಧಿಕಾರ ನನ್ನಲ್ಲಿ ಇರುತ್ತಾ, ಇಲ್ಲವೇ ಎನ್ನತಕ್ಕಂಥಾದ್ದು, ಇನ್ನೂ ಅಖಿಲ ಭಾರತಮಟ್ಟದಲ್ಲಿಯೇ ತೀರ್ಮಾನವಾಗಿಲ್ಲ. ಅನೇಕ ಜನ ಅಧ್ಯಕ್ಷರುಗಳ ಸಮಾವೇಶಗಳು ಆದಾಗಲೂ ಸಹ ಈ ವಿಚಾರ ಚರ್ಚೆಗೆ ಬಂದು ಹಲವಾರು ರಾಜ್ಯಗಳ ಅಧ್ಯಕ್ಷರುಗಳು ಇದರ ಬಗ್ಗೆ ಯಾವುದೂ ಅಂತಿಮ ನಿರ್ಣಯವಾಗಿಲ್ಲ. ಹಾಗಾಗಿ ಏನೋ ಒಂದು ನೋಟಿಸ್ ಕೊಡುತ್ತೇವೆ, ಚರ್ಚೆ ಆಗುತ್ತದೆ ತಾವೇನೋ ಒಂದು ನಿಲುವು ತೆಗೆದುಕೊಳ್ಳುತ್ತೀರಿ ಅದನ್ನು ಅಲ್ಲಿಗೆ

ಬಿಡುತ್ತೇವೆ. ಇವತ್ತು ನಾನು ಅಧ್ಯಕ್ಷ ಪೀಠದಲ್ಲಿ ಕುಳಿತಿದ್ದು ಅಂತಹ ಒಂದು ಸನ್ನಿವೇಶ ಉದ್ಭವವಾದಾಗ ನಾನು ಈ ರೀತಿಯ ಒಂದು ನಿಲುವು ತೆಗೆದುಕೊಳ್ಳದೆ ಹೋದರೆ ನನ್ನ ಮೇಲೆ ಇರತಕ್ಕಂಥ ಆಪಾದನೆ ಸಾಬೀತು ಆಗುತ್ತಿತ್ತು. ನಾನು ವೈಯಕ್ತಿಕ ಸಂಬಂಧಗಳಿಗಾಗಿ ನನ್ನ ನಿರ್ಣಯವನ್ನು ಸರಿಯಾದ ರೀತಿಯಲ್ಲಿ ತೆಗೆದುಕೊಳ್ಳಲಿಲ್ಲ ಎನ್ನತಕ್ಕಂಥಾದ್ದು ಆಗುತ್ತಿತ್ತು. ಅಮೇಲೆ ತಮಗೆ ನೆನಪು ಇದೆಯೋ ಇಲ್ಲವೋ ಹೋದ ಅಧಿವೇಶನ ಮುಗಿಯುವ ಒಂದು ದಿವಸದ ಮೊದಲು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಒಂದು ಸಂಪಾದಕೀಯ ನನ್ನ ಮೇಲೆ ಬರೆದಿದ್ದರು, ನಾನು ಬಹಳ ಹೆಚ್ಚು ಏನೂ ಆ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ನಿಜವಾಗಿಯೂ ನಾನು ಈ ರಾಜಕಾರಣ ಅಲ್ಲ, ಈ ಭೂಮಿ ಮೇಲೆಯೇ ಇರಬಾರದು, ಆ ಸಂಪಾದಕೀಯವನ್ನು ನೆನಪು ಮಾಡಿಕೊಂಡರೆ. ಅವರಿಗೆ ಕೇಳಿದೆ ನಾನು ಏನು ಶಿಕ್ಷೆ ಕೊಡುತ್ತೀರೋ ಕೊಡಿ, ಎಂದು ಹೇಳಿದ ಮೇಲೆ ಅವರು ಶಿಕ್ಷೆಯನ್ನು ಕೊಡಲಿಲ್ಲ ಏಕೆ ಬರೆದಿದ್ದೇವೆ ಎಂದೂ ಕೂಡ ಹೇಳಲಿಲ್ಲ. ಇಡೀ ಸದನದಲ್ಲಿರತಕ್ಕಂಥ ಸದಸ್ಯರು ಯಾರು ಓದಿದರೋ ಯಾರು ಓದಲಿಲ್ಲವೋ, ಒಬ್ಬರೂ ಕೂಡ ಒಂದು ಮಾತು ಕೂಡ ನನಗೆ ಹೇಳಲಿಲ್ಲ. ಅದು ಅಷ್ಟೇ ಸಾಲದು, ಕೆಲವರು ಅದನ್ನು ನೋಡಿ ಸಂತೋಷ ಪಟ್ಟುಕೊಂಡವರು ಇದ್ದಾರೆ. ಅದರ ಬಗ್ಗೆ ವೈಯಕ್ತಿಕವಾಗಿ ಚರ್ಚೆಮಾಡಿಕೊಂಡವರು ಇದ್ದಾರೆ. ನನ್ನ ಮನಸ್ಸಿಗೆ ಇನ್ನೂ ಖಾತರಿ ಆಗಿಲ್ಲ. ಏನು ಅಪರಾಧ ಮಾಡಿದ್ದೇನೆ ಈ ಸದನಕ್ಕೆ, ಈ ಸದನದ ಅಧ್ಯಕ್ಷ ಸ್ಥಾನದಿಂದ ಈ ರಾಜ್ಯಕ್ಕೆ ಎಂದು ಹೇಳಿ, ಹಿಂದೆ ಏನೇನು ನಡೆದಿತ್ತು, ಹೇಗೆ ಹೇಗೆ ನಡೆದಿತ್ತು ಎಂಬುದೆಲ್ಲಾ ನನಗೆ ಗೊತ್ತಿದೆ. ಅನೇಕ ರೀತಿಯ ಟೀಕೆಗಳಿಗೆ ಅನಾವಶ್ಯಕ ಚರ್ಚೆಗಳಿಗೆ ನನ್ನ ರಾಜಕೀಯ ನಿಲುವುಗಳ ಬಗ್ಗೆ, ಎಲ್ಲಾ ಬೆತ್ತಲೆ ಇದೆ. ನಾನು ನಿರಾಯುಧ. ನಾನು ಪತ್ರಿಕೆಗಳಿಗೆ ಹೋಗುವುದಕ್ಕೆ ಆಗುವುದಿಲ್ಲ. ನಾನು ಟೀಕೆಗಳಿಗೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ನನ್ನ ಮನೆಯಲ್ಲಿ ನಾನು ಬಾಗಿಲು ಹಾಕಿಕೊಂಡು ಕುಳಿತಿದ್ದೇನೆ ಅಸಹಾಯಕನಾಗಿ. ಅಲ್ಲಿಗೆ ಹೋಗುತ್ತಾರೆ. ಇಲ್ಲಿಗೆ ಹೋಗುತ್ತಾರೆ. ಅಲ್ಲಿ ಬಾಗಿಲು ತಟ್ಟಿದರಂತೆ. ಇಲ್ಲಿ ಕದ ತಟ್ಟಿದರಂತೆ ನಾನು ಎಲ್ಲೂ ಬಾಗಿಲು ತಟ್ಟಿಲ್ಲ. ಬರೆದವರ ಮನೆ ಬಾಗಿಲು ತಟ್ಟಿಲ್ಲ ನಾನು. ಪೂರ್ಣ, ಜಾಸ್ತಿ ಮಾನ ಮಾರ್ಯದೆ ಇಟ್ಟುಕೊಂಡಿದ್ದೇನೆ ಎಂದು ಅಲ್ಲದೇ ಇದ್ದರೂ ಕೂಡ ಒಂದು ಸ್ವಲ್ಪ ಮಾನ ಮಾರ್ಯದೆ ಇಟ್ಟುಕೊಂಡಿದ್ದೇನೆ. ಈ ಹಿನ್ನೆಲೆಯಲ್ಲಿ ನಾವು ಕಡೆ ಹಂತಕ್ಕೆ ಬಂದಿದ್ದೇವೆ. ಆನೆ ಹೊರಟು ಹೋಗಿದೆ. ಬಾಲ ಮಾತ್ರ ಇಟ್ಟುಕೊಂಡಿದ್ದೇವೆ. ಇನ್ನೆಷ್ಟಪ್ಪ ಹೊರುವುದಕ್ಕೆ ಸಾಧ್ಯವಾಗುತ್ತದೆ ಮನುಷ್ಯನಿಗೆ; ನನಗೆ ಎಷ್ಟು ಸಾಧ್ಯವಾಗುತ್ತದೆಯೋ ಅಷ್ಟು ಭಾರವನ್ನು ನನ್ನ ತಲೆಯ ಮೇಲೆ ನಾನು ಹೊತ್ತಿದ್ದೇನೆ. ಇನ್ನು ಹೊರುವುದಕ್ಕೆ ಶಕ್ತಿ ಇಲ್ಲ ನನಗೆ. ಯಾವ ಅಪರಾಧ ತಪ್ಪು ಮಾಡಲಾರದೇ ಈ ಮೂಟೆಯನ್ನು ಏನು ನಾನು ಹೊರುತ್ತಿದ್ದೇನೆ, ಇನ್ನು ಹೆಚ್ಚು ಹೊರುವುದಕ್ಕೆ ಶಕ್ತಿ ಇಲ್ಲ. ಇದು ನಿಮ್ಮನ್ನು ನಿರ್ಬಂಧಿಸಬೇಕೆಂದು ಆಗಲಿ, ಯಾರದೋ ಮನಸ್ಸು ನೋಯಿಸಬೇಕೆಂದು ಆಗಲಿ ನಾನು ಮಾಡಿರುವುದು ಅಲ್ಲ. ನೀವು ರಾಜೀನಾಮೆ ಕೊಡುವುದು ನನಗೆ ಸಮಾಧಾನ ಇಲ್ಲ ನೀವು ಸಕ್ರಿಯವಾಗಿ ಈ ಸದನದಲ್ಲಿರಬೇಕು, ತಾವು ಮತ್ತೆ ಬರಬೇಕು, ನೀವು ನಿಮ್ಮ ಹೋರಾಟವನ್ನು ಮುಂದುವರಿಸಿ, ನಿಮ್ಮ ಮೇಲೆ ನಿಜವಾಗಿಯೂ ಕೂಡ ಆತ್ಮೀಯವಾದ ಗೌರವ ಇದೆ ವೈಯಕ್ತಿಕವಾಗಿ. ಆದರೆ ಆ ಸನ್ನಿವೇಶ ಏನು ಇತ್ತು, ಅದಕೋಸ್ಕರ ನಾನು ಆ ಮಾತನ್ನು ಹೇಳಿದ್ದೇನೆ ತಾವು, ಅನ್ಯಥಾ ಭಾವಿಸತಕ್ಕಂಥಾದ್ದು ಬೇಡ. ಆಗ ತಾವು ಪುನಃ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ. ಈ ಪ್ರಸ್ತಾಪಕ್ಕೆ ನಾನು ಅಡ್ಡ ಬರುವುದಿಲ್ಲ. ಆ ಸನ್ನಿವೇಶದ ಕಾರಣದಿಂದಾಗಿ ಮಾತ್ರ ನಾನು ಆ ಮಾತನ್ನು

ಅಷ್ಟೇ ಹೇಳಿದ್ದೇನೆ. ದಯವಿಟ್ಟು ತಾವು ಮನಸ್ಸಿಗೆ ನೋವು ಮಾಡಿಕೊಳ್ಳಬೇಡಿ. ಆಗಬಹುದಲ್ಲ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ತಾವು ಎಂದೂ ಆ ತರಹ ಮಾತನಾಡುತ್ತಿರಲಿಲ್ಲ. ನನಗೆ ತಾವು ಈ ಸದನದಲ್ಲಿ ಹೊಸದೇನೂ ಅಲ್ಲ. ನಾನು 1967ಕ್ಕೆ ಬಂದಾಗಲೂ ನನ್ನ ಬಗ್ಗೆ ತಮಗೆ ಗೊತ್ತಿದೆ. ಈ ಸದನದಿಂದ ನನ್ನನ್ನು ಹೊರಗಡೆ ಹಾಕಿರತಕ್ಕಂಥಾದ್ದು, ಮಾರ್ಷಲ್‌ಗಳು ಹೊತ್ತುಕೊಂಡು ಹೋಗಿ ಹೊರಗೆ ಹಾಕಿರತಕ್ಕಂಥಾದ್ದು ಅನೇಕ ಸಂದರ್ಭಗಳಲ್ಲಿ ನಾನು ಒಂದೇ ಸಮನೆ ಈ ಸದನದಲ್ಲಿ ಹೋರಾಟ ಮಾಡಿಕೊಂಡು ಬಂದಿದ್ದೇನೆಯೇ ಹೊರತು ಯಾವುದೋ ಒಂದು ಉದ್ದೇಶಕೋಸ್ಕರ ಮಾಡಿದ್ದು ಅಲ್ಲ ಮತ್ತು ತಮ್ಮ ನಮ್ಮ ಸಂಬಂಧವನ್ನು....

ಅಧ್ಯಕ್ಷರು :- ವಾಟಾಳರೇ, ನಾನು ಈಗ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಮತ್ತೆ ಯಾವುದಾರೊಂದು ಸನ್ನಿವೇಶದಲ್ಲಿ ಹೇಳುತ್ತೇನೆ. ಈಗಲೇ ಹೇಳುವುದಿಲ್ಲ, ಇನ್ನೂ ಸಮಯ ಇದೆ. ಯಾವ ಯಾವ ರೀತಿಯ ಮಾನಸಿಕ ಹಿಂಸೆಗೆ ನನ್ನನ್ನು ಕೆಲವರು ಗುರಿಪಡಿಸಿದ್ದಾರೆ, ನಾನು ಯಾವ ಅಪರಾಧವನ್ನು ಮಾಡಿಲ್ಲ. ಯಾರಿಗೆ ಬೇಕಾದರೂ ಮುಕ್ತ ಅವಕಾಶ ಕೊಡುತ್ತೇನೆ. ನನ್ನ ವಿಚಾರದಲ್ಲಿ ಎಲ್ಲಾ ರೀತಿಯ ತಪಾಸಣೆ ಮಾಡಿ ವಾಪಸ್ಸು ಬರಬಹುದು. ನಿಮಗೂ ಎಲ್ಲಾ ಗೊತ್ತಿದೆ. ಗೊತ್ತಿಲ್ಲದೆ ಏನೂ ಇಲ್ಲ. ಬೆಳಿಗ್ಗೆ ನಡೆದ ಸನ್ನಿವೇಶವನ್ನು ಗಮನದಲ್ಲಿಟ್ಟುಕೊಂಡು ಬಹಳ ದೂರ ಹೋಯಿತು, ಬಹುಶಃ ನಿಮ್ಮ ಕೈಯಲ್ಲಿ ಲೈಟರ್ ಇಲ್ಲದೆ ಇದ್ದಿದ್ದರೆ ಆ ಲೈಟರನ್ನು ನೀವು ಹಚ್ಚದೇ ಇದ್ದಿದ್ದರೆ ನೀವು ಆ ಪುಸ್ತಕವನ್ನು ಹರಿದು ಬಿಸಾಕದಿದ್ದರೆ ನಾನು ಅಷ್ಟು ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಆ ಒಂದು ಕಾರಣದಿಂದ ನಾನು ಈ ಸದನದ ಗೌರವವನ್ನು ಎತ್ತಿ ಹಿಡಿದಿದ್ದೇನೆ. ನೀವೂ ಎಲ್ಲೋ ಉದ್ವೇಗದಲ್ಲಿದ್ದೀರಿ, ಆದ್ದರಿಂದ ಆ ಘಟನೆಯನ್ನು ಚಿತ್ರೀಕರಿಸುವುದು ಬೇಡ. ಈ ಘಟನೆಯನ್ನು ಯಾರೂ ಪ್ರಸ್ತಾಪ ಮಾಡುವುದು ಬೇಡ ಎಂದು ಅಷ್ಟೇ ಹೇಳಿದೆನೇ ಹೊರತು ನೀವು ಕನ್ನಡದ ಬಗ್ಗೆ ಈ ಸದನದಲ್ಲಿ ಒಂದು ಮಾತನ್ನು ಪ್ರಸ್ತಾಪ ಮಾಡುವುದಾದರೆ ಅದನ್ನು ನಾನು ಇಲ್ಲಿ ನಿರ್ಬಂಧಪಡಿಸಿದರೆ ಅದನ್ನು ಇನ್ನು ಎಲ್ಲಿ ಹೋಗಿ ಮಾತನಾಡುವುದಕ್ಕೆ ಆಗುತ್ತದೆ? ನಾನು ಆ ತರಹದ ಅಭಿಪ್ರಾಯದವನು ಅಲ್ಲ. ನೀವು, ನಿಮ್ಮ ಹೋರಾಟದ ಬಗ್ಗೆ ನನಗೆ ಗೌರವ ಇದೆ. ನೀವು ಹೇಳಿದ ಮಾತಿಗೆ ಹೇಳತಕ್ಕಂಥ ಹಕ್ಕು ನನಗೆ ಇದೆ. ಪುನಃ ಪ್ರಸ್ತಾಪ ಮಾಡಿ ಈಗ ಏನು ಹೇಳಿದಿರಿ, ತಿಳಿಗೊಂಡ ವಾತಾವರಣದಲ್ಲಿ ಅದಕ್ಕೆ ನಾನು ಪೂರ್ಣ ಸ್ವಾಗತ ಮಾಡುತ್ತೇನೆ. ಅದಕ್ಕೆ ಅವರು ಏನು ಹೇಳುತ್ತಾರೋ ಹೇಳಲಿ. ಸಮಯ ಬಂದಾಗ. ಆ ಒಂದು ಸನ್ನಿವೇಶಕ್ಕೆ ಸೀಮಿತವಾಗಿ ಆ ಒಂದು ನಿರ್ಣಯ ತೆಗೆದುಕೊಂಡೆ; ತಾವು ಅನ್ಯಥಾ ಭಾವಿಸಬಾರದು. ಈಗ ತಾವೆಲ್ಲಾ ಏನು ಹೇಳಿದಿರಿ ಬೆಳಿಗ್ಗೆ ಹೇಳಿರತಕ್ಕಂಥ ಮಾತುಗಳಲ್ಲಿ ಕೂಡ ಸಾರ್ವಜನಿಕರ ಗಮನಕ್ಕೆ ಬರತಕ್ಕಂಥ ಪದಗಳನ್ನು ಬೇಕಾದರೆ ಉಪಯೋಗ ಮಾಡಿಕೊಳ್ಳಲಿ, ನಾನು ಬೆಳಿಗ್ಗೆ ಏನು ನಿರ್ಬಂಧ ಹಾಕಿದ್ದೇನೆ ಅದನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇನೆ. ಆಗಬಹುದಲ್ಲವೇ? ಆದರೆ ಒಂದು ತಿಳಿದುಕೊಳ್ಳಬೇಕು. ಅಧ್ಯಕ್ಷರಾದಂತಹವರು ಅನೇಕ ರೀತಿಗಳಲ್ಲಿ ಅಸಹಾಯಕರಾಗಿರುತ್ತಾರೆ. ನಾನು ಯಾವ ರಾಜಕೀಯ ಚಟುವಟಿಕೆಯನ್ನು ಮಾಡಿಲ್ಲ. ಆಡಳಿತ ಪಕ್ಷದವರೆಲ್ಲಾ ಇಲ್ಲಿ ಕುಳಿತಿದ್ದಾರೆ ಬೇಕಾದರೆ ಹೇಳಲಿ. ಅನಿವಾರ್ಯವಾದ ಒಂದೆರಡು ಸಂದರ್ಭದಲ್ಲಿ ನಾನು ಮಾಡಿದ್ದರ ಬಗ್ಗೆ ಬಹಿರಂಗವಾಗಿ ಕ್ಷಮೆಯನ್ನು ಕೇಳಿದ್ದೇನೆ ಇಲ್ಲಿ ಕುಳಿತುಕೊಂಡು. ಇಂಥಾದ್ದರಲ್ಲಿ ನಾನು ಸಿಕ್ಕಿಹಾಕಿಕೊಂಡೆ ಎಂದು ಹೇಳಿ. ನಾನು ಕದ್ದು ಬಾಗಿಲು ಮುಚ್ಚಿಕೊಂಡು ಒಳಗೆ ಇದ್ದೆ.

ಆದರೂ ನನಗೆ ಕಾಲ ಬರುತ್ತಿಲ್ಲ. ನನಗಿಂತ ಉತ್ತಮರು ಒಳ್ಳೆಯ ಚರಿತ್ರೆವುಳ್ಳವರು ನನ್ನನ್ನು ಟೀಕೆ ಮಾಡಿದ್ದರೆ ನಾನು ಬೇಸರ ಮಾಡಿಕೊಳ್ಳುತ್ತಿರಲಿಲ್ಲ. ಅವರ ಯೋಗ್ಯತೆ ಗೊತ್ತಿದೆ ನನಗೆ. ಆದರೆ ನಾನು ಇವತ್ತು ಅವರಂತೆ ಮಾಡುವುದಕ್ಕೆ ಆಗುವುದಿಲ್ಲ.

ನನ್ನ ನಿಲುವನ್ನು ನಾನು ಸಮರ್ಥಿಸಿಕೊಂಡಿದ್ದೇನೆ. ಸದನದ ಹೊರಗೆ ಹೋರಾಟ ಮಾಡಿದ್ದೇನೆ. ನಾನೂ ಕೂಡ ರಾಜಕೀಯ ಕಾರ್ಯಕರ್ತನೇ. ಆದರೆ ಇವೊತ್ತು ಆ ಹಿನ್ನೆಲೆಯಲ್ಲಿ ಇಲ್ಲಿ ಕುಳಿತು ಕೆಲಸ ಮಾಡತಕ್ಕಂಥ ಸ್ಥಿತಿಯಲ್ಲಿ ಕುಳಿತಿಲ್ಲ. ಹಿಂದೆ ಏನೇನು ನಡೆದಿದೆ ಎಂಬುದೂ ಕೂಡ ಗೊತ್ತು. ನನಗೆ ಅದೊಂದೇ ವ್ಯಥೆಯಾಗುತ್ತದೆ. ತಾವುಗಳು ಆ ಎರಡೂ ಎಡಿಟೋರಿಯಲ್ಸ್‌ನ್ನು ತಂದು ಓದಬೇಕು. ಬೇಕಾದರೆ ನಾನು ತಮಗೆ ತರಿಸಿಕೊಡುತ್ತೇನೆ. ಅದನ್ನು ಇನ್ನೊಂದು ಸಲ ತಾವುಗಳು ಓದಿ ತಮಗೆ ಏನು ಅನ್ನಿಸುತ್ತದೋ ಎಂಬುದನ್ನು ಹೇಳಿ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ಅದರಿಂದ ತಮಗೆ ನೋವಾಗಿದೆ. ಅದು ನಿರಂತರವಾಗಿ ನಡೆಯುತ್ತಲೇ ಇದೆ.

ಅಧ್ಯಕ್ಷರು :- ತಮಗೆಲ್ಲಾ ಯಾವುದಾದರೂ ಒಂದು ಸನ್ನಿವೇಶಕ್ಕೆ ಸಂಬಂಧಿಸಿದಂತೆ ಒಂದು ನಿಲುವನ್ನು ನಾನು ತೆಗೆದುಕೊಂಡರೆ ತಾವುಗಳು ಇಷ್ಟು ನೋವಿಗೆ ಒಳಗಾಗುತ್ತೀರಿ, ಹೇಳಿ, ಬೇಕಾದರೆ ಒಂದು ಅರ್ಧ ಗಂಟೆ ಕುಳಿತು ಚರ್ಚೆ ಮಾಡಿ ಹೇಳಿ. ಇಂಥಿಂಥ ಸಂದರ್ಭದಲ್ಲಿ ನೀವು ಹೀಗೆ, ಹೀಗೆ, ಮಾಡಿದ್ದೀರಿ, ಇಂಥ ತಪ್ಪುಗಳು ಆಗಿವೆ, ಹೀಗೆ ಈ ರಾಷ್ಟ್ರದ ಯಾವ ವಿಧಾನ ಸಭೆಯಲ್ಲಿಯೂ ಆಗಿಲ್ಲ, ಅಂಥಾದ್ದೆಲ್ಲಾ ಈ ವಿಧಾನಸಭೆಯಲ್ಲಿ ಆಯಿತು, ನೀವು ಅಧ್ಯಕ್ಷ ಸ್ಥಾನದಲ್ಲಿ ಕುಳಿತುಕೊಂಡಾಗ ಅಂದರೆ, ಒಂದು ನಿಮಿಷ ಕೂಡ, ಈ ಸ್ಥಾನದಲ್ಲಿ ಇರುವುದಿಲ್ಲ, ಅಷ್ಟೇ ಅಲ್ಲ ನಾನು ಈ ರಾಜಕಾರಣದಲ್ಲಿಯೇ ಇರುವುದಿಲ್ಲ, ಅದು ನನಗೆ ಅಗತ್ಯವಿಲ್ಲ. ಹೀಗೆ ಯಾವ ಸ್ಮಗಲರ್ಸ್‌ಗೆ ಹೇಳುವುದಿಲ್ಲ, ದರೋಡೆಕೋರರಿಗೆ ಹೇಳುವುದಿಲ್ಲ, ಕೊಲೆಗಡುಕರಿಗೆ ಹೇಳುವುದಿಲ್ಲ, ವಂಚಕರಿಗೆ ಹೇಳುವುದಿಲ್ಲ, ರಾಷ್ಟ್ರದ್ರೋಹಿಗಳಿಗೆ ಹೇಳುವುದಿಲ್ಲ. ಅಂಥ ಕೆಟ್ಟ ಭಾಷೆಯನ್ನು ಹೇಳಲು, ಅಂಥ ಭಾಷೆ ಹೊರಬರಲು ಯಾರು ಕಾರಣರೋ, ಯಾರ ಪ್ರೋತ್ಸಾಹವೋ ? ಯಾರು ಅದಕ್ಕೆ ಸೂಚನೆ ಕೊಟ್ಟರೊ? ಯಾರು ಅದಕ್ಕೆ ಸಲಹೆ ಕೊಟ್ಟರೋ ಎಂದು ಗೊತ್ತಿಲ್ಲ; ಯಾರು ಅದಕ್ಕೆ ಅನುಮೋದನೆ ಕೊಟ್ಟರೋ ಎಂಬುದು ನನಗೆ ಗೊತ್ತಿಲ್ಲ. ಆದರೆ ಅದಕ್ಕೆ ನಾನು ಬಲಿಯಾಗಿದ್ದೇನೆ. ಆದರೆ ಇಡೀ ಸದನದ ಪೈಕಿ ಯಾರಾದರೂ ಒಬ್ಬರು ಈ ಕುರಿತು ಹೇಳಿದ್ದೀರಾ ? ಏನು ಹೀಗೆಲ್ಲಾ ಬಂದಿದೆ ತಾವು ಬೇಸರ ಮಾಡಿಕೊಳ್ಳಬೇಡಿ ಎಂದು ಒಂದು ಮಾತನ್ನು ಯಾರಾದರೂ ಹೇಳಿದ್ದೀರಾ? ನಾನು ನಾಚಿಕೆ ಬಿಟ್ಟು....ಯಾರು ಹೇಳಿದರೋ, ಏನು ಹೇಳಿದರೋ, ಯಾರು ಹೇಳಿಲ್ಲವೋ ನಾನು ಮುಂದುವರಿಯಬೇಕು, ನಾನು ಇಲ್ಲಿ ಬಂದು ಕುಳಿತಿದ್ದೇನೆ. ಯಾಕೆಂದರೆ ಇದನ್ನು ಬಿಟ್ಟು ಊಟಕ್ಕೆ ನಡೆಯುವುದಿಲ್ಲ ಎಂದು ಅದಕ್ಕೋಸ್ಕರ ಇಲ್ಲೆ ಕುಳಿತಿದ್ದೇನೆ. ನನ್ನ ನೋವು ತಮಗೆ ಅರ್ಥವಾಯಿತೇ ? ನನಗೆ ಈ ಮೂಟೆಯನ್ನು ಏನು ಹೋರಿಸಿದ್ದಾರೆ, ಇದರ ಭಾರ ಈಗಾಗಲೇ ಹೆಚ್ಚಾಗಿದೆ. ಈಗ ಮತ್ತೆ ಅದಕ್ಕೆ ಹೆಚ್ಚಿಗೆ ಸೇರಿಸಲು ಇಷ್ಟವಿಲ್ಲದ್ದಕ್ಕೆ ಸ್ವಲ್ಪ ಕರಿಣವಾಗಿ ನಡೆದುಕೊಂಡಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ (ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರು ತಮ್ಮ ಭಾವನೆಯನ್ನು ಇಲ್ಲಿ ವ್ಯಕ್ತ ಮಾಡಿದ್ದಾರೆ. ಆ ಹಿನ್ನಲೆಯಲ್ಲಿ ಅನೇಕ ವಿಚಾರಗಳನ್ನು ಇಲ್ಲಿ ಚರ್ಚೆ ಮಾಡಿದ ಮೇಲೆ....

ಅಧ್ಯಕ್ಷರು :- ಪ್ರಕಾಶ್‌ರವರೇ, ನಮ್ಮ ಅಧಿಕಾರಿಗಳಿಗೆ ಸಂಬಂಧಿಸಿದಂತೆ, ಮಾತನಾಡಿಕೊಂಡು ನಾನು ಸಾರ್ವಜನಿಕವಾದ ಯಾವುದಾದರೂ ಒಂದು ಕೆಲಸ ಹೇಳಿದರೆ,*

ಶ್ರೀ ಎಂ.ಪಿ. ಪ್ರಕಾಶ್ :- ಮಾನ್ಯ ಅಧ್ಯಕ್ಷರೇ, ತಾವುಗಳು ಆ ಮಾತುಗಳನ್ನು ದಯಮಾಡಿ ಆಡಬಾರದು....

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ತಾವುಗಳು ಹೀಗೆ ಭಾವುಕರಾಗಿ ಮಾತನಾಡಬಾರದು.

ಅಧ್ಯಕ್ಷರು :- ಇವರೆಲ್ಲಾ ನಿಮ್ಮ ಸಹೋದ್ಯೋಗಿಗಳು... ಇವರನ್ನೆಲ್ಲಾ ನಂಬಿಕೊಂಡು ನಾನು ಬದುಕಿದ್ದೇನೆಯೇ ? ಇವನ್ನೆಲ್ಲಾ ನುಂಗಿಕೊಂಡು ಬದುಕಿದ್ದೇನೆ ನಾನು. ನಾನು ಹೇಗೆ ರಾಜಕೀಯ ಜೀವನವನ್ನು ನಡೆಸಿಕೊಂಡು ಬಂದಿದ್ದೇನೆ ಎಂಬುದು ನನಗೆ ಗೊತ್ತಿದೆ.

ಶ್ರೀ ವಾಟಾಳ್ ನಾಗರಾಜ್ :- ನಿರಂತರವಾಗಿ ನಿಮ್ಮ ಮೇಲೆ ರಾಜಕೀಯ ಪಿತೂರಿ ನಡೆಯುತ್ತಾ ಇದೆ. ಆ ಪಿತೂರಿಗೆ ನೀವು ಬಲಿ ಆಗಬಾರದು.

ಶ್ರೀ ಎಂ.ಪಿ. ಪ್ರಕಾಶ್ :- ತಾವುಗಳು ಭಾವುಕರಾಗಿ ಮಾತನಾಡುತ್ತಿದ್ದೀರಿ. ರಾಜಕೀಯ ಜೀವನದಲ್ಲಿ ರತಕ್ಕಂಥ ನಮಗೆಲ್ಲರಿಗೂ ಇಂಥ ಮಾತುಗಳನ್ನು ಹೇಳುತ್ತಾರೆ. ಅದನ್ನು ನಾವು ಅಷ್ಟು ಮನಸ್ಸಿಗೆ ಹಚ್ಚಿಕೊಳ್ಳಬಾರದು...

ಅಧ್ಯಕ್ಷರು :- ಇನ್ನೊಂದು ಸನ್ನಿವೇಶವನ್ನು ನಾನು ತಮ್ಮ ಗಮನಕ್ಕೆ ಹೇಳುತ್ತೇನೆ. ಒಂದು ಪತ್ರಿಕೆಯಲ್ಲಿ ಬರೆಯುತ್ತಾರೆ. ಯಾವುದೋ ಗಲಾಟೆಯಾಗುತ್ತದೆ, ನಾನು ಆದರಲ್ಲಿ ಆಪರಾಧಿ, ನಾನು ಅದನ್ನೆಲ್ಲಾ ಬಚ್ಚಿಟ್ಟಿದ್ದೇನೆ ಎಂದು ಹೇಳುತ್ತಾರೆ.

ಅದಕ್ಕೆ ಹೆಸರನ್ನು ಹೇಳಲು ಇಚ್ಚಿಸದೇ ಇರತಕ್ಕಂಥ ಒಬ್ಬ ಮಾಜಿ ಮಂತ್ರಿಗಳು ಪ್ರತಿಕ್ರಿಯೆ ಕೊಡುತ್ತಾರೆ, "ನಾನು ಈ ಸ್ಥಾನದಲ್ಲಿದ್ದರೆ ರಾಜೀನಾಮೆ ಕೊಡುತ್ತಿದ್ದೆ"- ಎಂದು ಹೇಳುತ್ತಾರೆ. ಆದರೆ ಯಾರನ್ನು ಬೇಕಾದರೂ ಎದುರಿಸತಕ್ಕಂಥ ನೈತಿಕ ಬಲ ನನ್ನಲ್ಲಿದೆ. ಹೇಡಿಗಳನ್ನು ನಾನು ಸಹಿಸುವುದಿಲ್ಲ. ನನ್ನ ಜೀವನದಲ್ಲಿ ಒಂದು ನಿಮಿಷ ಕೂಡ ಹೇಡಿಯಾಗಿ ಬದುಕಿಲ್ಲ. I am a fighter. But I will never compromise. you have all made me disarmed. you have pitted cowards against me. I am suffering this humiliation. I don't say you, Mr. Prakash some of our own frineds...where else should I disclose my agony, please tell me.

ನನಗೆ ನನ್ನ ಮನೆಯಲ್ಲಿ ಯಾರಾದರೂ ಅಪಮಾನ ಮಾಡಿದ್ದರೆ, ನನ್ನ ಆಸ್ತಿ ವಿಚಾರದಲ್ಲಿ ಯಾರಾದರೂ ಹೇಳಿದ್ದರೆ ಅದನ್ನು ಪ್ರೈವೇಟ್ ಆಗಿ ಹೇಳಿಕೊಳ್ಳುತ್ತಿದ್ದೆ. I am subjected to humiliation in public. This is the only forum where I can disclose my agony.

ಶ್ರೀ ವಾಟಾಳ್ ನಾಗರಾಜ್ :- ಸನ್ಮಾನ್ಯ ಅಧ್ಯಕ್ಷರೇ, ತಮ್ಮ ನೋವಿನಲ್ಲಿ ನಾವೆಲ್ಲರೂ ಭಾಗಿಗಳಾಗಿದ್ದೇವೆ...

ಶ್ರೀ ಎಂ.ಪಿ. ಪ್ರಕಾಶ್ :- ಸನ್ಮಾನ್ಯ ಅಧ್ಯಕ್ಷರೇ, ಸಾರ್ವಜನಿಕ ಬದುಕಿನಲ್ಲಿ ರತಕ್ಕಂಥ ನಮ್ಮೆಲ್ಲರನ್ನೂ ಕೂಡ ಈ ರೀತಿಯಾದ ಟೀಕೆಗಳಿಗೆ, ಅಪಮಾನಗಳಿಗೆ ಒಳಪಡಿಸುತ್ತಾರೆ. ಅದೇ ರೀತಿಯಲ್ಲಿ ಗೌರವವನ್ನೂ

* ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಕೊಟ್ಟಿದ್ದಾರೆ. ಅಂಥ ಗೌರವವನ್ನು ಕೂಡ ಸಮಾಜವು ನಮಗೆ ಕೊಟ್ಟಿದೆ. ಹೀಗೆ ನಾವು ಗೌರವವನ್ನು ಸ್ವೀಕರಿಸುವುದರ ಜೊತೆಗೆ ಇಂಥ ಟೀಕೆ ಟಿಪ್ಪಣಿಗಳನ್ನು.... ತಾವುಗಳು ಉದ್ವೇಗಕ್ಕೆ ಏಕೆ ಒಳಗಾಗುತ್ತೀರಿ ಅಂದರೆ ತಾವಗಳು ಭಾವುಕರು... ಆ ಕಾರಣಕ್ಕಾಗಿ ಜನರು ಇಂಥ ನಿರಾಧಾರವಾದಂಥ ಟೀಕೆ ಟಿಪ್ಪಣಿಗಳನ್ನೆಲ್ಲಾ ಮಾಡುತ್ತಾರಲ್ಲಾ? ಎಂದು ತಮ್ಮ ಮನಸ್ಸಿಗೆ ನೋವು ಆಗಿದೆ. ಆದರೆ ಸಾರ್ವಜನಿಕ ಜೀವನದಲ್ಲಿ ಇದು ಒಂದು ಭಾಗವಾಗಿರುವುದರಿಂದ.... ತಮಗೂ ಗೊತ್ತಿದೆ, ಕಿರಿ ವಯಸ್ಸಿನಿಂದಲೂ ಇಂಥ ಅನುಭವ ತಮಗೆ ಇದೆ. ಇಂಥ ದೊಡ್ಡ ಅನುಭವವು ತಮಗೆ ಇದೆ. ಆದುದರಿಂದ ಇದೆಲ್ಲವನ್ನೂ ತಾವುಗಳು ದೀರ್ಘವಾಗಿ ತೆಗೆದುಕೊಂಡು ಹೋಗುವ ಅಗತ್ಯವಿಲ್ಲ. ಯಾರು ತಮಗೆ ಅಪಮಾನ ಮಾಡಿದ್ದಾರೋ ಅವರು ಬಯಲಿಗೆ ಬಿದ್ದೇ ಬೀಳುತ್ತಾರೆ. ಸಾರ್ವಜನಿಕರು ಆ ವಿಚಾರಗಳನ್ನು ಗುರುತು ಹಿಡಿದೇ ಹಿಡಿಯುತ್ತಾರೆ. ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದು ಏನೆಂದರೆ, ತಾವುಗಳು ವಿಷಯಗಳನ್ನು ಚರ್ಚೆ ಮಾಡಿದ ಮೇಲೆ, ಮತ್ತೆ ಅವರು ನೋವನ್ನು ಪ್ರಸ್ತಾಪ ಮಾಡಿದ ಮೇಲೆ, ಇದನ್ನು ಇಲ್ಲಿಗೇ ಮುಕ್ತಾಯ ಮಾಡುವುದು ಒಳ್ಳೆಯದು ಎಂದು ತಮ್ಮಲ್ಲಿ ಮತ್ತು ಮಾನ್ಯ ಶಾಸಕರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :- ಸಂತೋಷ... ಅಲ್ಲಿಗೇ ಮುಗಿಸೋಣ.. ಮಾನ್ಯ ಮಲಕರೆಡ್ಡಿಯವರು ತಮ್ಮ ಮಾತನ್ನು ಪ್ರಾರಂಭ ಮಾಡಿ.... ನಾವು ಅನೇಕ ಸಾರಿ ನೋವು ಅನುಭವಿಸಿದ್ದು ಆಯಿತು, ನೋವು ಉಂಡದ್ದೂ ಆಯಿತು...

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ಅನೇಕ ಸಾರಿ ನಾವು, ನೀವು ಭೇಟಿ ಮಾಡಿದ್ದೇವೆ. ಕುಳಿತು ಚರ್ಚೆ ಮಾಡಿದ್ದೇವೆ. ನಿಮ್ಮ ನೋವನ್ನು ನಮ್ಮ ಜೊತೆಗೆ ಹಂಚಿಕೊಂಡಿದ್ದೀರಿ. ನಾವು ನಿಮ್ಮ ಜೊತೆಯಲ್ಲಿ ಮಾತನಾಡಿದ್ದೇವೆ. ಹೀಗೆ ಎಲ್ಲಾ ವಿಚಾರಗಳೂ ನಡೆದಿವೆ. ಇದು ನಿಜವಾಗಿಯೂ ಒಂದು ರೀತಿಯಲ್ಲಿ ಪಿತೂರಿ. ಈ ಪಿತೂರಿಯಲ್ಲಿ ಯಾರ್ಯಾರೋ ಅನೇಕರು ಸೇರಿದ್ದಾರೆ. ಅದಕ್ಕೆ ನೀವು ಅಧೈರ್ಯ ಪಡತಕ್ಕಂಥ ವಿಚಾರ ಬೇಡ. ಹಾಗೆ ಯಾವೊತ್ತೂ ಆಗಬಾರದು ಎಂದು ನಾನು ಒತ್ತಾಯ ಮಾಡಿ ಹೇಳುತ್ತಿದ್ದೇನೆ.

ಅಧ್ಯಕ್ಷರು :- ತಾವು ಒಮ್ಮೆ ನನ್ನ ಕ್ಷೇತ್ರಕ್ಕೆ ಬನ್ನಿ. ಯಾರಿಗೆ ಅಧೈರ್ಯ ಎಂದು ತಮಗೆ ಗೊತ್ತಾಗುತ್ತದೆ. ಅಧೈರ್ಯ ಎನ್ನುವುದು ನನ್ನ ದಿನಚರಿಯಲ್ಲಿಯೇ ಇಲ್ಲ. ರಾಜಿ, ಹೇಡಿತನ, ಅಧೈರ್ಯ, ಮುಂತಾಗಿ ಯಾವುದೂ ನಮ್ಮ ಡೈರಿಯಲ್ಲಿ, ಡಿಕ್ಷ್ನರಿಯಲ್ಲಿ ಇಲ್ಲ. ಒಂದು ಕಾಲಕ್ಕೆ ನಾನು ಮನೆಯಿಂದ ಹೊರಡಬೇಕಾದರೆ, ನನ್ನ ಹೆಂಡತಿಗೆ ಹೋಗಿ ಬರುತ್ತೇನೆ ಎಂದು ಹೇಳುತ್ತಿರಲಿಲ್ಲ. ಹೋಗುತ್ತಾ ಇದ್ದೇನೆ ಎಂದು ಹೇಳುತ್ತಿದ್ದೆ. ಬಂದರೆ ನಿನ್ನ ಅದೃಷ್ಟ ಎಂದು ಹೇಳುತ್ತಿದ್ದೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ನಿಮ್ಮ ಕ್ಷೇತ್ರಕ್ಕೆ ನೀವು ಕರೆಯದಿದ್ದರೂ ನಾನು ಬರುತ್ತೇನೆ ಎಂದು ಹೇಳಿದ್ದೇನೆ. ತಮ್ಮ ಔದಾರ್ಯಕ್ಕೆ ನಾನು ಋಣಿ.

M.K. SPEAKER :- It's alright. Time will tell. Time is the best answer.

ಬೇಡಿಕೆಗಳ ಮೇಲಿನ ಚರ್ಚೆ

ವೈದ್ಯಕೀಯ, ಶಿಕ್ಷಣ ಆರೋಗ್ಯ ಇತ್ಯಾದಿ ಇಲಾಖೆಗಳ ಬೇಡಿಕೆಗಳ ಬಗ್ಗೆ.

ಡಾ. ಎ. ಬಿ. ಮಲಕ ರೆಡ್ಡಿ (ಯಾದ್‌ಗೀರ್) : ಸನ್ಮಾನ್ಯ ಅಧ್ಯಕ್ಷರೇ, ವೈದ್ಯಕೀಯ ಶಿಕ್ಷಣ ಮತ್ತು

ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂತೆ, ಸನ್ಮಾನ್ಯ ಸಚಿವರಾದ ಎಂ.ಪಿ. ಪ್ರಕಾಶ್‌ರವರು ಬೇಡಿಕೆ ಕ್ರಮಾಂಕ : 28-29ನ್ನು ಮಂಡಿಸಿದ್ದಾರೆ. 1999-2000ದ ಸಾಲಿಗಾಗಿ ಈ ಬೇಡಿಕೆಗಳನ್ನು ಮಂಡಿಸಿ ಸಭೆಯ ಅನುಮೋದನೆಯನ್ನು ಕೇಳಿದ್ದಾರೆ. ನಾನು ಚರ್ಚೆ ಪ್ರಾರಂಭಿಸುವಾಗ ಸಂಬಂಧಪಟ್ಟ ಸಚಿವರು ಇಲ್ಲ....

ಅಧ್ಯಕ್ಷರು :- ಆರೋಗ್ಯ ಸಚಿವರಿಗೆ ಅಮೀಬಿಯಾಸಿಸ್ ಆಗಿ ಆಸ್ಪತ್ರೆಗೆ ಹೋಗಿದ್ದಾರೆ- ಎಂದು ಅವರ ಆಪ್ತ ಕಾರ್ಯದರ್ಶಿಯವರು ನನಗೆ ಬಂದು ಹೇಳಿದ್ದಾರೆ. ನಾನು ಅಡ್ಡಿ ಇಲ್ಲ ನೋಡಿಕೊಳ್ಳುತ್ತೇನೆ ಎಂದು ಹೇಳಿದ್ದೇನೆ. ವೈದ್ಯಕೀಯ ಶಿಕ್ಷಣ ಸಚಿವರು ಇದ್ದಾರೆ. ಸರಕಾರದ ಪರವಾಗಿ ಬೇರೆಯವರು ದಾಖಲು ಮಾಡಿಕೊಳ್ಳುತ್ತಾರೆ, ತಾವುಗಳು ಮಾತನಾಡಿ. ತಾವುಗಳೂ ಕೂಡ ವೈದ್ಯರಿದ್ದೀರಿ. ಆ ವಿಚಾರ ತಮಗೆ ಗೊತ್ತಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೇ, ಮಾನ್ಯ ಮಲಕರೆಡ್ಡಿಯವರು ತಮ್ಮ ಮಾತನ್ನ ಪ್ರಾರಂಭ ಮಾಡುತ್ತಾರೆ. ಆರು ಗಂಟೆಯವರೆಗೆ ಮಾತನಾಡಿ ನಂತರ ನಾಳೆಗೆ ಮುಂದುವರಿಸೋಣ.

ಡಾ : ಎ.ಬಿ. ಮಲಕರೆಡ್ಡಿ :- ನಾನು ವೈದ್ಯಕೀಯ ಇಲಾಖೆಗೆ ಸಂಬಂಧಪಟ್ಟ ಹಾಗೆ ಒಂದೆರಡು ಮಾತುಗಳನ್ನು ಹೇಳಲು ಇಚ್ಚಿಸುತ್ತೇನೆ. ಮುಖ್ಯವಾಗಿ ಆರೋಗ್ಯ ಇಲಾಖೆಗೆ ಸಂಬಂಧಪಟ್ಟ ಕೆಲವು ವಿಚಾರಗಳನ್ನು ಸರಕಾರದ ಮುಂದಿಡಬೇಕೆಂದು ಇಚ್ಚಿಸಿದ್ದೆ. ಕೆಲವು ಮಾಹಿತಿಗಳನ್ನು ನಾನು ತಂದಿದ್ದೆ, ಆದರೆ ಸಂಬಂಧಪಟ್ಟ ಸಚಿವರು ಇಲ್ಲದಿದ್ದ ಕಾರಣ ವೈದ್ಯಕೀಯ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಕೆಲವು ವಿಚಾರಗಳನ್ನು ಪ್ರಸ್ತಾಪಿಸ ಬಯಸುತ್ತೇನೆ. ಸುಮಾರು ಮೂರು ವರ್ಷಗಳಿಂದ ವೈದ್ಯಕೀಯ ಶಿಕ್ಷಣ ಇಲಾಖೆಗೆ ಮಾನ್ಯ ಶಂಕರ ನಾಯಕ್‌ರವರು ಸಚಿವರಾಗಿದ್ದಾರೆ. ಎರಡು ವರ್ಷಗಳಿಂದ ಅವರಿಗೆ ಏನೂ ಮಾಡಲು ಆಗಲಿಲ್ಲ. ಪ್ರೊಸೀಜರಲ್ ಫಾರ್ಮಾಲಿಟೀಸ್‌ನಲ್ಲಿಯೇ ಕಾಲಹರಣ ಮಾಡಿದರು. ಅದೇ ಒಂದು ವರ್ಷದಿಂದ ಕೆಲಸದಲ್ಲಿ ಸ್ವಲ್ಪ ಪ್ರಗತಿ ಕಂಡು ಬಂದಿದೆ. ಸರಕಾರದ ವೈದ್ಯಕೀಯ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂತೆ ಕೇವಲ ನಾಲ್ಕೇ ಸಂಸ್ಥೆಗಳಿವೆ. ಮೆಡಿಕಲ್ ಕಾಲೇಜುಗಳು ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟ ಹಾಗೆ ಅನೇಕ ಸಂಸ್ಥೆಗಳು ಇರಬಹುದು. ಆದರೆ ಸರಕಾರದ ನೇರ ಕಕ್ಷೆಗೆ ಬರತಕ್ಕಂಥ ಈ ನಾಲ್ಕು ಸಂಸ್ಥೆಗಳಲ್ಲಿ ನಡೆಯುತ್ತಿರತಕ್ಕಂಥ ಕೆಲವು ಚಟುವಟಿಕೆಗಳನ್ನು ನೋಡಿದರೆ ನಮಗೆ ಭಯವಾಗುತ್ತದೆ. ಯಾಕೆ ನಾನು ಇದನ್ನು ಹೇಳುತ್ತಿದ್ದೇನೆ ಅಂದರೆ, ಈ ಇಲಾಖೆಯನ್ನು ಒಬ್ಬ ವೈದ್ಯಕೀಯ ತಜ್ಞರು ನಿಭಾಯಿಸುತ್ತಿದ್ದಾರೆ. ನನಗೆ ತಿಳಿದ ಮಟ್ಟಿಗೆ ಮಾನ್ಯ ಸಚಿವರಲ್ಲಿ ಇಲಾಖೆಯ ಸುಧಾರಣೆ ಮಾಡಬೇಕೆಂಬ ಬಗ್ಗೆ ಯಾವ ವಿಚಾರಗಳು ಇವೆ, ಅದಕ್ಕೆ ಸರಕಾರದಿಂದ ಸಾಕಷ್ಟು ಸಹಕಾರ, ಸಹಾಯ ಸಿಗುತ್ತಾ ಇಲ್ಲವೆಂದು ಅಂದುಕೊಂಡಿದ್ದೇನೆ. ಎರಡು ವರ್ಷಗಳ ಕಾಲ ಏನೂ ಮಾಡದೇ ಒಂದು ವರ್ಷದಲ್ಲಿ ನಾಲ್ಕು ಸಂಸ್ಥೆಗಳಲ್ಲಿನ ಖಾಲಿ ಹುದ್ದೆಗಳನ್ನು ತುಂಬಿದ್ದಾರೆ.

ಅದೂ ಶೇಕಡಾ 100ರಷ್ಟು ಆಗಿಲ್ಲ. ಮತ್ತು ಸರಿಯಾದ ತರಬೇತಿ ಪಡೆದ ಶಿಕ್ಷಕರನ್ನು ಈ ನಾಲ್ಕು ಸಂಸ್ಥೆಗಳಿಗೆ ಕೊಡಲು ಇನ್ನೂ ಸಾಧ್ಯವಾಗಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಕ್ಷಮಿಸಬೇಕು. ಅಧ್ಯಕ್ಷರೇ, ನಾನು ಇರಲಿಲ್ಲ. ತಾವು ಸ್ವಲ್ಪ ಎಮೋಷನ್‌ನಲ್ಲಿದ್ದಿರಿ. ಕೆಲವು ಮಾತುಗಳನ್ನು ಮಾತ್ರ ನಾನು ಕೇಳಿದೆ. ಆ ಎಲ್ಲ ಮಾತೂ ಕಡತಕ್ಕೆ ಹೋಗುವ ಅವಶ್ಯಕತೆ ಇಲ್ಲವೆಂದು ನಾನು ಭಾವಿಸಿದ್ದೇನೆ. ನಾನು ಕೈಜೋಡಿಸಿ ಕೇಳಿಕೊಳ್ಳುತ್ತೇನೆ:

ದಯವಿಟ್ಟು ಅವನ್ನೆಲ್ಲಾ ತೆಗೆದುಹಾಕಬೇಕು. ಆವೇಶದಲ್ಲಿ ಹೇಳುವಾಗ ನ್ಯಾಚುರಲಿ ಇವೆಲ್ಲಾ ಶಬ್ದಗಳು ಬರುತ್ತವೆ.

ಅಧ್ಯಕ್ಷರು : ಖರ್ಗೆಯವರೇ, ಆ ಮಾತುಗಳನ್ನು ಅನ್ನಿಸಿಕೊಂಡು ನಾನು ಹೇಗೆ ಇರಲಿ. ಕೇಳಿದರೇನೇ ನಿಮಗೆ ಇಷ್ಟು ಬೇಸರವಾಗುತ್ತದೆ. ಅಟಿಲೀಸ್ಟ್ ವಿರೋಧಪಕ್ಷದ ನಾಯಕರಾಗಿ ಆ ಭಾವನೆ ವ್ಯಕ್ತಪಡಿಸಿದ್ದಕ್ಕೆ ನಾನು ತಮಗೆ ಋಣಿಯಾಗಿರುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಆಗುತ್ತೆ, ಆದರೆ ಏನು ಮಾಡುವುದು ? ನಾವೆಲ್ಲರೂ ಕೂಡ ಹಾಗೆ ಆಗಬಾರದು ಎಂಬ ಭಾವನೆ ಇರುವವರು. ಆದರೆ ಸದನದೊಳಗೆ....

ಅಧ್ಯಕ್ಷರು : ಆಯಿತು ತಮ್ಮ ಮಾತಿಗೆ ನಾನು ಮಾನ್ಯತೆ ಕೊಡುತ್ತೇನೆ. ಅಲ್ಲಿನ ಕೆಲವು ರೆಫರೆನ್ಸ್‌ಸನ್ನು ತೆಗೆದುಹಾಕಿದ್ದೇನೆ.

ಡಾ ಎಂ.ಬಿ. ಮಲಕರಡ್ಡಿ : ಅಧ್ಯಕ್ಷರೇ ನನಗೂ ಯಾಕೋ ತಮ್ಮ ಉದ್ವೇಗದ ವಿಚಾರಗಳನ್ನು ಕೇಳಿದ ಮೇಲೆ ಮಾತನಾಡುವುದಕ್ಕೆ ಅಷ್ಟು ಪುಷ್ಟಿ ಬರವೊಲ್ಲದು. ನನಗನ್ನಿಸುತ್ತದೆ : ಸದನವನ್ನು ಇಷ್ಟಕ್ಕೇ ಮುಕ್ತಾಯಗೊಳಿಸಿ, ನಾಳೆ ಪುನಃ ನಾನು ಪ್ರಾರಂಭ ಮಾಡುತ್ತೇನೆ.

ಅಧ್ಯಕ್ಷರು : ನಿಮಗೆ ಅನುಮಾನ ಇರಬಹುದು, ಯಾವುದು ತೆಗೆಯುವುದು ಎಂಬುದರ ಬಗ್ಗೆ ಸ್ಪಷ್ಟಪಡಿಸಿ, ತೊಂದರೆಯೇನಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಕಡೇ ಮಗ * ಅದು ಸರಿ ಅನ್ನಿಸುತ್ತಿಲ್ಲ. ಕಡತ ನೋಡಿ ಆಮೇಲೆ ಬೇಕಾದರೆ ತೆಗೆದುಹಾಕಿ.

ಅಧ್ಯಕ್ಷರು : ನಮ್ಮ ತಾಯಿ ವಿಚಾರ ಹೀಗೆ ಹೇಳಿದ್ದಾರೆ, ಅದು ಬೇಡ ಅಂತೀರಾ ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಪತ್ರಿಕೆಗಳಲ್ಲಿ ಅದು ಬರುವುದು ಬೇಡ, ಯಾವ ಫೋರಂಗಳಲ್ಲಿ ಅದನ್ನು ಖಂಡಿಸಬೇಕೋ ಎಲ್ಲರೂ ಮಾಡೋಣ.

ಅಧ್ಯಕ್ಷರು : ಅದು ಯಾರ ಬಗ್ಗೆಯೂ ಆರೋಪಣೆ ಆಗಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅಲ್ಲ ಅಲ್ಲ, ಚಾರ್ಜಲ್ಲ, ಆದರೆ ನಮಗೆ ನಾವೇ ಯಾಕೆ ಹೇಳಿಕೊಳ್ಳಬೇಕು. ನಮ್ಮನ್ನು ನಾವೇ ಹ್ಯುಮಿಲಿಯೇಟ್ ಮಾಡಿಕೊಳ್ಳುವ ಅವಶ್ಯಕತೆ ಇಲ್ಲ.

ಶ್ರೀ ಎಸ್. ಸುರೇಶಕುಮಾರ್ (ರಾಜಾಜಿರಾವ್) : ಅಧ್ಯಕ್ಷರೇ, ತಾವು ಎಕ್ಸ್‌ಪ್ರೆಸ್ ಮಾಡಿದ್ದನ್ನು ಖರ್ಗೆಯವರು ಹೇಳಿದಂತೆ ದಾಖಲೆಯಿಂದ ಎಕ್ಸ್‌ಪಂಜ್ ಮಾಡಿದ್ದೀರಿ. ಆದರೆ ಇದನ್ನೆಲ್ಲಾ ನಾನು ತಮ್ಮ ಹತ್ತಿರ ಎರಡು ಮೂರು ಸಾರಿ ಎಕ್ಸ್‌ಪ್ರೆಸ್ ಮಾಡಿದ್ದೇನೆ. ಮಾಧ್ಯಮಗಳಲ್ಲಿ ಹಿಟ್ ಅಂಡ್ ರನ್ ಕೇಸ್ ಜಾಸ್ತಿ ಆಗುತ್ತಿದೆ. ಹೈವೇನಲ್ಲಿ ಬರುವಾಗ ಯಾರೋ ಪೂಡೀತಾರೆ ಓಡಿಹೋಗಿ ಬಿಡುತ್ತಾರೆ, ಆ ಏಟು ತಿಂದವರಿಗೆ ಗೊತ್ತು ನೋವು. ಅವನು ಅಯ್ಯಾ ಈ ವೆಹಿಕಲ್ ನಂಬರು ಅಂದರೂ ಯಾರೂ ಸಹಾಯಕ್ಕೆ ಬರುವುದಿಲ್ಲ. ಬರೆಯುವವರಿಗೆ ಯಾರು ಬರೆಸಿಕೊಳ್ಳುತ್ತಾನೆ ಅವನ ಮನಸ್ಸಿನ ತೊಳಲಾಟ ಖಂಡಿತ ಅರ್ಥವಾಗುವುದಿಲ್ಲ. ಆಮೇಲೆ ರಸ್ತೆಯಲ್ಲಿ ಹೋಗುತ್ತಿದ್ದಾಗ ಎಲ್ಲಾ ನಮ್ಮನ್ನೇ ನೋಡುತ್ತಿದ್ದಾರೇನೋ ಎಂಬ ಭಾವನೆ. ಆ ಲೇಖನ ಓದಿ ಬಿಟ್ಟು. ಆದ್ದರಿಂದ ತಮ್ಮ ಮನಸಿನ

---

* ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ತೊಳಲಾಟ ಯಾರಿಗೇ ಆದರೂ ಫೀಲ್ ಆಗುತ್ತದೆ. ಆದರೂ ತಾವು ಆ ಜಾಗದಲ್ಲಿ ಇರುವುದರಿಂದ, ಹಿರಿಯರಾದ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದಂತೆ ದಾಖಲೆಗಳನ್ನು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಒಪ್ಪಿದ್ದೇನೆ. ನನ್ನ ತಾಯಿ ವಿಚಾರ ಪ್ರಸ್ತಾಪಿಸಿ ಅದರ ಮುಂದಕ್ಕೆ ಏನು ಹೇಳಿದ್ದೇನೆ ಅದು ರೆಕಾರ್ಡ್‌ಗೆ ಹೋಗುವುದು ಬೇಡ.

ಈಗ ಸದನವನ್ನು ನಾಳೆ ಬೆಳಿಗ್ಗೆ 11 ಘಂಟೆವರೆಗೆ ಮುಂದೂಡುತ್ತಿದ್ದೇನೆ.

ಸದನವು ಸಂಜೆ 5.44 ಕ್ಕೆ ಮುಂದೂಡಲ್ಪಟ್ಟು ಮತ್ತೆ ದಿನಾಂಕ 24-6-99ರ ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು).

(+ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)